# ಅನಿಕೇತನ

**ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ**
**ಜನವರಿ–ಡಿಸೆಂಬರ್ – ೨೦೧೮**
**ಸಂಯುಕ್ತ ಸಂಚಿಕೆ**

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ರಘುನಾಥ ಎಚ್.ಎಸ್.**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – ೫೬೦ ೦೦೨
ದೂರವಾಣಿ : ೦೮೦–೨೨೨೧೧೭೩೦ / ೨೨೧೦೬೪೬೦
ಇ–ಮೇಲ್ : sahithya.academy@gmail.com
ವೆಬ್‌ಸೈಟ್ : www.karnatakasahithyaacademy.org

**ANIKETHANA :** A Literary Journal (Quarterly).
Edited by Dr. Raghunatha H.S. Published by Kariyappa N.,
Registrar, Karnataka Sahithya Academy, Kannada Bhavana,
J.C. Road, Bengaluru - 560002

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಂಪಾದಕರು
**ಡಾ. ರಘುನಾಥ ಎಚ್.ಎಸ್.**

ಈ ಆವೃತ್ತಿಯ ಹಕ್ಕು : ಕರ್ನಾಟಕ ಸಾಹಿತ್ಯ ಅಕಾಡೆಮಿ

| | | |
|---|---|---|
| ಮುದ್ರಣ | : | ೨೦೨೧ |
| ಪ್ರತಿಗಳು | : | ೨೦೦೦ |
| ಬೆಲೆ | : | ರೂ. ೬೦/– |
| ಪುಟಗಳು | : | ix+೨೭೨=೨೮೧ |
| ಮುಖಪುಟ ಚಿತ್ರ | : | ಏಕಾಕ್ಷರ ಪ್ರಿಂಟರ್ಸ್ |

ಪ್ರಕಾಶಕರು
**ಶ್ರೀ ಕರಿಯಪ್ಪ ಎನ್.,** ರಿಜಿಸ್ಟ್ರಾರ್,
ಕರ್ನಾಟಕ ಸಾಹಿತ್ಯ ಅಕಾಡೆಮಿ

**ಬಿಡಿ ಪ್ರತಿ** : ರೂ. ೬೦/–
**ವಾರ್ಷಿಕ ಪ್ರತಿ** : ರೂ. ೨೪೦/–
**ಅಜೀವ ಚಂದಾ** : ರೂ. ೧೪೦೦/–

**ಮುದ್ರಣ**
**ಏಕಾಕ್ಷರ ಪ್ರಿಂಟರ್ಸ್**
ನಂ. 2, 5ನೇ 'ಬಿ' ಮುಖ್ಯರಸ್ತೆ
ಬ್ಯಾಂಕ್ ಆಫ್ ಬರೋಡಾ ರಸ್ತೆ
ಕಾಮಾಕ್ಷಿಪಾಳ್ಯ, ಬೆಂಗಳೂರು – 560 079
ಮೊಬೈಲ್ : 9844365538

## ಪ್ರಧಾನ ಸಂಪಾದಕರ ಮಾತು

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಹತ್ವದ ಹಲವು ಯೋಜನೆಗಳಲ್ಲಿ 'ಅನಿಕೇತನ' ತ್ರೈಮಾಸಿಕ ಪ್ರಕಟಣೆಯೂ ಒಂದು. ಹಲವಾರು ವರ್ಷಗಳಿಂದ ಕಾಲಕಾಲಕ್ಕೆ ಅಗತ್ಯವಾದ ಬದಲಾವಣೆಗಳೊಂದಿಗೆ ಅನಿಕೇತನ ರೂಪ ರೂಪಗಳನ್ನು ದಾಟುತ್ತಾ ಬಂದಿದೆ. ಕೆಲವು ವರ್ಷ ಅನಿವಾರ್ಯವಾದ ಕಾರಣಗಳಿಂದ ಅನಿಕೇತನ ಸಂಚಿಕೆಗಳು ಹೊರ ಬಂದಿರಲಿಲ್ಲ. ಆದಕಾರಣ ೨೦೧೮ ಹಾಗೂ ೨೦೧೯ ಎರಡು ವರ್ಷದ ಅನಿಕೇತನಗಳನ್ನು ಎರಡು ಸಂಯುಕ್ತ ಸಂಚಿಕೆಗಳನ್ನಾಗಿ ಪ್ರಕಟಿಸಲು ನಮ್ಮ ಸಮಿತಿಯು ತೀರ್ಮಾನಿಸಿತು.

೨೦೧೮ನೆಯ ಸಾಲಿನ ಸಂಯುಕ್ತ ಸಂಚಿಕೆಯನ್ನು ಸಂಪಾದಿಸಿಕೊಡಲು ಡಾ. ಎಚ್.ಎಸ್. ರಘುನಾಥ್ ಅವರನ್ನು ೨೦೧೯ನೆಯ ಸಾಲಿನ ಸಂಯುಕ್ತ ಸಂಚಿಕೆಯನ್ನು ಸಂಪಾದಿಸಿಕೊಡಲು ಡಾ. ಚಿತ್ತಯ್ಯ ಪೂಜಾರ್ ಅವರನ್ನು ಕೋರಲಾಯಿತು. ಅವರಿಬ್ಬರೂ ಪ್ರೀತಿಯಿಂದ ಒಪ್ಪಿ ತಮಗೆ ವಹಿಸಿದ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ, ಬದ್ಧತೆಯಿಂದ, ಕಾಲಮಿತಿಯಲ್ಲಿ, ಪರಿಶ್ರಮದಿಂದ ಮೌಲಿಕವಾದ ಎರಡು ಕೃತಿಗಳನ್ನು ಸಿದ್ಧಪಡಿಸಿ ನೀಡಿದ್ದಾರೆ. ಬಹಳ ಹಿಂದೆಯೇ ಓದುಗರ ಕೈಸೇರಬೇಕಾದ ಕೃತಿಗಳು ಕೊರೋನಾ ಕಾರಣದಿಂದಾಗಿ ವಿಳಂಬವಾಗಿ ಕೈಸೇರುತ್ತಿವೆ. ಅರಿವು ಸಾರ್ವಕಾಲಿಕ ಆದ ಕಾರಣ ತಾವು ವಿಳಂಬವನ್ನು ಮನ್ನಿಸಿ ಸ್ವೀಕರಿಸುತ್ತೀರೆಂದು ನಂಬಿದ್ದೇನೆ.

ಜನವರಿಯಿಂದ ಡಿಸೆಂಬರ್ ೨೦೧೮ರವರೆಗಿನ ಸಂಯುಕ್ತ ಸಂಚಿಕೆಯನ್ನು ಡಾ.ಎಚ್.ಎಸ್. ರಘುನಾಥ್ ಅವರು ಸಂಪಾದಿಸಿದ್ದಾರೆ. ಒಟ್ಟು ೩೨ ಲೇಖನಗಳು ಮತ್ತು ಕವಿತೆಗಳಿಂದ ಕೂಡಿರುವ ಈ ಸಂಚಿಕೆಯು ಹಲವಾರು ವಸ್ತು ವೈವಿಧ್ಯದ ವ್ಯಾಪ್ತಿಯನ್ನು ಹೊಂದಿದೆ. ಒಂದು ಸಂಗ್ರಹ ಯೋಗ್ಯ ಕೃತಿಯನ್ನಾಗಿ ಸಂಪಾದಿಸಿಕೊಟ್ಟ ಮಿತ್ರ ಡಾ. ಎಚ್.ಎಸ್. ರಘುನಾಥ್ ಅವರಿಗೂ ಮೌಲಿಕವಾದ ಲೇಖನಗಳನ್ನು ನೀಡಿರುವ ಎಲ್ಲಾ ಲೇಖಕರಿಗೂ, ಕವಿತೆಗಳಿಗೂ ವಂದಿಸುತ್ತೇನೆ. ನಮ್ಮ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರ ಸಹಕಾರ, ಮಾರ್ಗದರ್ಶನ, ಪರಿಶ್ರಮ ಅವಿಸ್ಮರಣೀಯ. ಅಕಾಡೆಮಿಯ ರಿಜಿಸ್ಟ್ರಾರ್ ಎನ್. ಕರಿಯಪ್ಪನವರಿಗೂ ನಮ್ಮ ಸಿಬ್ಬಂದಿ ಬಳಗ ಹರೀಶ್‌ಕುಮಾರ್, ಹರೀಶ್, ಜಾವೀದ್, ಸುಚಿತ್ರ, ಗೋಪಾಲ್ ನಮ್ಮ ವಾಹನಗಳ ಸಾರಥಿಗಳಾದ ಸುನೀಲ್, ಸಿದ್ದು ಅವರಿಗೂ ಪ್ರೀತಿಯಿಂದ ನೆನೆಯುತ್ತಾ ವಂದಿಸುತ್ತೇನೆ. ಕೃತಿಯನ್ನು ಸುಂದರವಾಗಿ ಮುದ್ರಿಸಿದ ಏಕಾಕ್ಷರ ಪ್ರಿಂಟರ್ಸ್ ಬಳಗಕ್ಕೂ ವಂದನೆಗಳು

– **ಡಾ. ಬಿ.ವಿ. ವಸಂತಕುಮಾರ್,** ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

## ಸಂಪಾದಕರ ಮಾತು

**ಆತ್ಮೀಯ ಸಾಹಿತ್ಯ ಬಂಧುಗಳೆ,**

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ ಸಾಹಿತ್ಯ ಸಂಚಿಕೆ 'ಅನಿಕೇತನ'ದ ಸಂಯುಕ್ತ ಸಂಚಿಕೆ ತಮ್ಮ ಮುಂದಿದೆ. ಡಾ. ಬಿ.ವಿ. ವಸಂತ–ಕುಮಾರ್‌ರವರ ಅಧ್ಯಕ್ಷತೆಯ ಅಕಾಡೆಮಿಯ ನೂತನ ಸಮಿತಿಯು ತನ್ನ ಹೊಣೆಗಾರಿಕೆಯನ್ನು ವಹಿಸಿಕೊಂಡ ತಕ್ಷಣದಿಂದಲೇ ಅಕಾಡೆಮಿಯ ಹಲವಾರು ಯೋಜನೆಗಳಿಗೆ ತಕ್ಷಣದ ಚಾಲನೆಯನ್ನು ನೀಡಿ, ಮಿಂಚಿನ ಕ್ರಿಯಾಶೀಲತೆಯನ್ನು ತೋರಿದ್ದರ ಪರಿಣಾಮವೆ 'ಅನಿಕೇತನ' ದ ಪ್ರಕಟಣಾ ಕಾರ್ಯ ಸಾಧ್ಯಗೊಳ್ಳುತ್ತಿದೆ.

ಈ ಹಿಂದಿನ ಸಂಚಿಕೆಗಳು ಸಾಹಿತ್ಯದ ವಿವಿಧ ಪ್ರಕಾರದ ಬರೆಹಗಳನ್ನು ಒಳಗೊಂಡ ವೈವಿಧ್ಯತೆಯ ದೃಷ್ಟಿಕೋನ ಹಾಗೂ ಯಾವುದೋ ಒಂದು ನಿರ್ದಿಷ್ಟ ಸಾಹಿತ್ಯ ಪ್ರಕಾರಕ್ಕೆ ಮಾತ್ರ ಸೀಮಿತಗೊಳಿಸಿದ್ದ ಬರೆಹಗಳ ಸ್ವರೂಪ ಈ ಎರಡೂ ಮಾದರಿಯನ್ನು ಹೊಂದಿ ಪ್ರಕಟಗೊಳ್ಳುತ್ತಿದ್ದವು.

ಆದರೆ ಪ್ರಸ್ತುತದ ಸಂಚಿಕೆಯು ಪುನರ್ ಚಾಲನೆಯ ರೂಪದಲ್ಲಿರುವುದರಿಂದ ಹಾಗೂ ಬರೆಹದ ಬಗ್ಗೆ ತೀವ್ರ ಆಸಕ್ತಿ ಇರುವ ಅನೇಕ ಮಂದಿ ಲೇಖಕರ ಅಪೇಕ್ಷೆಯ ದೃಷ್ಟಿ ಮತ್ತು ಪ್ರಾತಿನಿಧ್ಯತೆಯ ಕಾರಣದಿಂದ ಲೇಖನಗಳ ಸ್ವರೂಪವನ್ನು ನಿರ್ದಿಷ್ಟ ಪ್ರಕಾರದ ಮಾದರಿಗೆ ಸೀಮಿತಗೊಳಿಸದೆ ವೈವಿಧ್ಯತೆಗೆ ಪ್ರಾಮುಖ್ಯತೆ ನೀಡಲಾಗಿದೆ. ಹಾಗಾಗಿ ಸಾಹಿತ್ಯದ ವಿವಿಧ ಪ್ರಕಾರದ ಬರೆಹಗಳಿಗೆ ಸಾಂಕೇತಿಕವಾದ ಪ್ರಾತಿನಿಧ್ಯತೆಯನ್ನು ಈ ಸಂಚಿಕೆ ಹೊಂದಿದೆ. ಸಮಕಾಲೀನವಾದ ಅನೇಕ ಆಕರ್ಷಣೆ, ಸೆಳೆತ, ಒತ್ತಡಗಳಿಂದಾಗಿ ಸಾಹಿತ್ಯಾಭಿರುಚಿ, ಓದು, ಬರೆಹಗಳಂತಹ ಸೃಜನಶೀಲತೆಗಳು ಸಾಕಷ್ಟು ಕುಂಠಿತಗೊಳ್ಳುತ್ತಿರುವ ಇಂದಿನ ದಿನಮಾನಗಳಲ್ಲಿ ಅಕಾಡೆಮಿಯ ಸಾಹಿತ್ಯ ಪತ್ರಿಕೆಯು ಎಲ್ಲರನ್ನೂ ತಲುಪಿ, ಮುಂದಿನ ಸಂಚಿಕೆಗಳಿಗೆ ಬೆಂಬಲ ದೊರಕಲಿ ಎಂಬ ಒತ್ತಾಸೆ ನಮ್ಮೆಲ್ಲರದ್ದಾಗಿದೆ.

ಹಸ್ತಪ್ರತಿಶಾಸ್ತ್ರದಿಂದ ಹಿಡಿದು ವಿಭಿನ್ನ ಸಾಹಿತ್ಯ ಧಾರೆಯ ಹಿನ್ನೆಲೆಯುಳ್ಳ ಸುಮಾರು ೩೨ ಬಗೆಯ ಬರೆಹದ ಮಾದರಿಗಳು ಈ ಸಂಚಿಕೆಯಲ್ಲಿ ಸಂಕಲನಗೊಂಡಿವೆ. ನಾಡಿನ ಹಿರಿಯ, ಗಣ್ಯ ವಿದ್ವಾಂಸರು, ಲೇಖಕರಿಂದ ಹಿಡಿದು ನಾಡಿನ ಯಾವುದೋ ಮೂಲೆಯಲ್ಲಿ ಕುಳಿತು ಸಾಹಿತ್ಯಾಭಿರುಚಿಯೊಂದಿಗೆ ಸ್ಥಳೀಯವಾಗಿ ಕ್ರಿಯಾಶೀಲರಾಗಿರುವ ಹಲವು ಮಂದಿ ಉದಯೋನ್ಮುಖರ ಬರೆಹ, ಭಾವನೆಗಳಿಗೂ ಇಲ್ಲಿ ಅವಕಾಶವನ್ನು ನೀಡಲಾಗಿದೆ. 'ಅನಿಕೇತನ'ವು ನಾಡಿನ ಎಲ್ಲಾ ಸಾಹಿತ್ಯಾಸಕ್ತರ ಧ್ವನಿಯಾಗಬೇಕು, ಸಿದ್ಧ ಪ್ರಸಿದ್ಧರೊಂದಿಗೆ ಎಲೆಮರೆಯ ಕಾಯಿಯಂತಿರುವ ಕನ್ನಡದ ಪ್ರತಿಭೆಗಳಿಗೂ ಅವಕಾಶ ದೊರಕಬೇಕೆನ್ನುವ 'ಸರ್ವಸ್ಪರ್ಶಿ' ನಿಲುವು ಸಂಪಾದಕನಾದ ನನ್ನದಾಗಿತ್ತು.

ನೂತನ ಸಂಚಿಕೆ ನಿಮ್ಮ ಮುಂದಿದೆ, ಅದರ ಗುಣದೋಷಗಳನ್ನು ಸ್ವೀಕರಿಸುವ ಪ್ರಾಂಜಲ ಮನಸ್ಸು ನಮ್ಮದಾಗಿದೆ. ಮುಂದಿನ ಸಂಚಿಕೆಗಳಿಗೆ ಸಹಕರಿಸಿ, ಬೆಂಬಲಿಸಿ, ಅನಿಕೇತನ ನಮ್ಮೆಲ್ಲರದ್ದು. ಇಂತಹದ್ದೊಂದು ಅಕ್ಷರದ ಕಾಯಕದೊಂದಿಗೆ, ಸಾಹಿತ್ಯ ಪರಿಚಾರಿಕೆಯನ್ನು ನಿರ್ವಹಿಸಲು ಜವಾಬ್ದಾರಿ ನೀಡಿದ ಅಕಾಡೆಮಿಯ ಮಾನ್ಯ ಅಧ್ಯಕ್ಷರು ಹಾಗೂ ಸನ್ಮಿತ್ರರಾದ ಡಾ. ಬಿ.ವಿ. ವಸಂತಕುಮಾರ್‌ರವರಿಗೆ, ಅಕಾಡೆಮಿಯ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ, ರಿಜಿಸ್ಟ್ರಾರ್ ಶ್ರೀ. ಕರಿಯಪ್ಪನವರಿಗೆ ಮತ್ತು ಕಛೇರಿಯ ಎಲ್ಲಾ ಆಡಳಿತ ವರ್ಗದವರಿಗೆ ಮತ್ತು ಇಂತಹದ್ದೊಂದು ಸಂಚಿಕೆ ರೂಪಿಸಲು ತಮ್ಮ ಬರೆಹ, ಲೇಖನಗಳನ್ನು ನೀಡಿ ಬೆಂಬಲಿಸಿದ ಬರೆಹಗಾರರಿಗೆ, ಅಂದವಾಗಿ ಡಿ.ಟಿ.ಪಿ ಮಾಡಿಕೊಟ್ಟ ಶಿವಮೊಗ್ಗದ ನೈನಿಕ ಕಮ್ಯೂನಿಕೇಷನ್‌ನ ಶ್ರೀ ಹರ್ಷ ಎ.ಬಿ.ರವರಿಗೆ, ಅಂದವಾಗಿ ಮುದ್ರಿಸಿದ ಏಕಾಕ್ಷರ ಪ್ರಿಂಟರ್ಸ್‌ರವರಿಗೆ ಹಾಗೂ ಸಹೃದಯರಾದ ತಮ್ಮೆಲ್ಲರಿಗೂ ಈ ಮೂಲಕ ಧನ್ಯವಾದಗಳನ್ನು ತಿಳಿಸುವೆ.

**ಡಾ. ರಘುನಾಥ ಎಚ್.ಎಸ್**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಶ್ರೀಮತಿ ಇಂದಿರಾಗಾಂಧಿ ಸರ್ಕಾರಿ ಪ್ರಥಮ ದರ್ಜೆ
ಮಹಿಳಾ ಕಾಲೇಜು, ಸಾಗರ–೫೭೭೪೦೧,
ಶಿವಮೊಗ್ಗ ಜಿಲ್ಲೆ

# ಪುಟ ತೆರೆದಂತೆ


೧. **ಕನ್ನಡ ಬರವಣಿಗೆ : ಹಸ್ತಪ್ರತಿಗಳು ಮತ್ತು ದಾಖಲೆಗಳು**
ಡಾ. ಕೆ.ರವೀಂದ್ರನಾಥ । ೧

೨. **ವಿದ್ವತ್ ಪರಂಪರೆಯ ತಾರೆಗಳು "ತೀ.ನಂ. ಶ್ರೀಕಂಠಯ್ಯ ಮತ್ತು ಟಿ.ವಿ. ವೆಂಕಟಾಚಲಶಾಸ್ತ್ರಿ"**
ಶ್ರೀಮತಿ ನಯನಾ ಎಸ್. । ೧೬

೩. **ಶ್ರೀಕೃಷ್ಣ ಆಲನಹಳ್ಳಿ ಅವರ ಕವಿತೆಗಳು**
ಪ್ರೊ. ಟಿ.ಪಿ. ಅಶೋಕ । ೨೬

೪. **ಹಳಗನ್ನಡ ಸಾಂಸ್ಕೃತಿಕ ಪದಕೋಶ : ಒಂದು ವಿಮರ್ಶೆ**
ಡಾ. ಮಾಧವ ಪೆರಾಜೆ । ೪೦

೫. **ಡಾ. ಬಿ.ಆರ್.ಅಂಬೇಡ್ಕರ್ ರವರ ದೃಷ್ಟಿಯಲ್ಲಿ ಮನುವಾದ**
ಡಾ. ಶಿವಲಿಂಗಪ್ಪ ಆಯ್.ಭಂಡಾರಿ । ೬೩

೬. **ಕನಕದಾಸರ ಕೃತಿಗಳಲ್ಲಿ ಸಾಂಸ್ಕೃತಿಕ ಪಲ್ಲಟಗಳು**
ಡಾ. ಸಬಿತಾ ಬನ್ನಾಡಿ । ೭೧

೭. **ಮೂಕ ಧ್ವನಿಗಳು, ಅಶೋಕ ಪರಿಜ್ಞಾನ**
ಹಾಜಿರಾ ಖಾನಂ । ೭೭

೮. **ಹಿಂಚೆಮುಂಚೆ**
ಡಾ. ಪ್ರಕಾಶ್ ಮರ್ಗನಳ್ಳಿ । ೭೯

೯. **ರಕ್ತಕ್ಕಿಲ್ಲದ ಭೇದಭಾವ ನಿಮಗ್ಯಾಕೆ , ಆಗಮನ ಹಿಂದೆ ನಿರ್ಗಮನ ಇರುತ್ತದೆ**
ಜಿ. ನಾಗೇಶ್ ಸಾಗರ । ೮೨

೧೦. **'ಅಪವಿತ್ರದ ನುಡಿಯ ನುಡಿವ ಸೂತಕವೇ ಪಾತಕ'**
ಡಾ. ಶುಭಾ ಮರವಂತೆ । ೮೫

೧೧. **ಕುವೆಂಪು ನಿರ್ವಚಿಸಿದ ಕಾವ್ಯಮೀಮಾಂಸೆ ಮತ್ತು ವಿಮರ್ಶಾ ಮಾರ್ಗ**
ಡಾ. ಚನ್ನೇಶ್ ಹೊನ್ನಾಳಿ । ೯೨

೧೨. **ನಿರುಪಾಧೀಶ್ವರರ ವಚನಗಳಲ್ಲಿ ಉಪಮೆ – ರೂಪಕಗಳು**
ಡಾ. ಎಚ್. ಎಮ್. ಚನ್ನಪ್ಪಗೋಳ । ೧೦೮

೧೩. **ಬಸವರಾಜ ಕಟ್ಟೀಮನಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ**
ಡಾ. ಸುನಂದಾ ಎಸ್ ಹಾಡಕಾರ । ೧೧೬

೧೪. **ಆಕಳು ಬದುಕಿತು. ; (ಆತ್ಮಚರಿತ್ರೆಯ ಒಂದು ಪ್ರಸಂಗ)**
ಡಾ. ಅಮರೇಶ ನುಗಡೋಣಿ । ೧೨೩

೧೫. **‘ನೂಲೊಲ್ಲ್ಯಾಕ ಚೆನ್ನೀ’ : ದೇಸಿ ಸೊಲ್ಲು**
ಡಾ. ಜಿ. ಸಣ್ಣಹನುಮಪ್ಪ । ೧೨೮

೧೬. **ದಕ್ಕಿಬಿಡು ಹೀಗೊಮ್ಮೆ , ಕವಿತೆ ನಿದ್ರಿಸುವುದಿಲ್ಲ**
ಕಾವ್ಯ ಎಸ್. ಕೋಳಿವಾಡ । ೧೩೭

೧೭. **ರಕ್ತದ ಕಲೆಗಳ ಮೇಲೆ**
ಡಾ. ವೈ.ಎಂ. ಭಜಂತ್ರಿ । ೧೩೯

೧೮. **ಬಣ್ಣದ ವೇಷ**
ಡಾ. ಪ್ರಜ್ಞಾ ಮತ್ತಿಹಳ್ಳಿ । ೧೪೫

೧೯. **ಸಾತ ಬಾರಾ**
ಡಾ. ಜೆ.ಪಿ. ದೊಡಮನಿ । ೧೫೬

೨೦. **ಒಡಲಿನ ಮಡಿಲು ಯಕ್ಷತಾರೆ – ಬಯಲಾಟದ ನೆನಪುಗಳು**
ಡಾ. ಜಿ.ಎಸ್. ಭಟ್ಟ । ೧೬೯

೨೧. **ಪೌರಾಣಿಕ ಮತ್ತು ಐತಿಹಾಸಿಕ ಸ್ತ್ರೀಪಾತ್ರಗಳು: ಆಧುನಿಕ ನಾಟಕಗಳ ಅಭಿವ್ಯಕ್ತಿಯ ನೆಲೆಯಲ್ಲಿ**
ಡಾ. ಸಂಧ್ಯಾ ಹೆಗಡೆ, ದೊಡ್ಡಹೊಂಡ । ೧೭೬

೨೨. **ಕನ್ನಡ ತತ್ವಪದ ಪರಂಪರೆ**
ಡಾ. ಗುರುಲಿಂಗಪ್ಪ ಧಬಾಲೆ । ೧೯೨

೨೩. **ನನಗೊಂದು ಹೆಸರು ಕೊಡಿ**
ವೇಣು ಜಾಲಿಬೆಂಚಿ । ೨೦೩

೨೪. **ತೇರಿಗೆ ಬಂದ ಗಣಪ, ವೇಷ**
ಜಿ. ಯೋಗೀಶ । ೨೦೫

೨೫. **ಗೊರೂರರ ‘ಬೈಲಹಳ್ಳಿ ಸರ್ವೆ’ ಪ್ರಬಂಧದ ವಿಶ್ಲೇಷಣೆ ಮತ್ತು ವೈಶಿಷ್ಟ್ಯತೆ**
ಡಾ. ಮೂಡಲಗಿರಿಯಯ್ಯ । ೨೦೭

೨೬. **ಗುಪ್ತ ಮಂಚಣ್ಣ : ಒಂದು ವಿವೇಚನೆ**
ಡಾ. ರಮೇಶ ಹಣಮಂತಪ್ಪಾ ಮೂಲಗೆ । ೨೧೯

೨೭. **ಅಕ್ಕನ ವಚನಗಳಲ್ಲಿ ಸ್ತ್ರೀ ಅಂತರಂಗದ ನಿವೇದನೆ**
ಡಾ. ರವಿಕುಮಾರ್ .ಎಸ್.ಎಂ । ೨೨೬

೨೮. **ವರ್ತಮಾನ**
ಪ್ರೊ. ರವೀಂದ್ರಭಟ್ಟ ಕುಳಿಬೀಡು । ೨೩೩

೨೯. **ಚಿತ್ರದುರ್ಗದ ಅರೆಮಲೆನಾಡಿನ ಜನಪದೀಯರಲ್ಲಿ ವಜ್ಜುರ ಆಚರಣೆ**
ಡಾ. ರಮೇಶ ಕೆ. । ೨೩೪

೩೦. **ಮಧುರ ಚೆನ್ನರ ‘ನನ್ನ ನಲ್ಲ’ ನವೋದಯ ಕಾವ್ಯದ ಆದ್ಯ ಕೃತಿ**
ಡಾ. ಪ್ರಕಾಶ ಗ.ಖಾಡೆ । ೨೩೯

೩೧. **ಮನಸ್ಸೆಂಬುದು ತುಂಬಿಸಬೇಕಾದ ಪಾತ್ರೆಯಲ್ಲ ಅದೊಂದು ಜಾಗೃತಗೊಳಿಸಬೇಕಾದ ಶಕ್ತಿ**
ಡಾ. ಸಿ.ಬಿ ಚಿಲ್ಕರಾಗಿ । ೨೪೭

೩೨. **ಉತ್ತರಕಾಂಡ**
ಉಷಾ ಎನ್. । ೨೫೮

೩೩. **‘ಗೆರೆ’ – ಪ್ರಾಯೋಗಿಕ ವಿಮರ್ಶೆ**
ಡಾ. ಎ. ರಘುರಾಂ । ೨೬೪

**ನಮ್ಮ ಲೇಖಕರು**